**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 524/2019**

| | | | |
|---|---|---|---|
| **ಹೆಸರು** | **:** | **ಸಿದ್ದರಾಜ** | **ಚಾ.ಸಾ.5** |
| **ತಂದೆಯ ಹೆಸರು** | **:** | **ಬೋದೆಪ್ಪ** | **ಪ್ರಾ.ಸಾ.4** |
| **ವಯಸ್ಸು** | **:** | **30 ವರ್ಷ** | **ದಿನಾಂಕಃ 12-01-2024** |
| **ಉದ್ಯೋಗ** | **:** | **ಶಿಕ್ಷಕ** | |
| **ವಾಸಸ್ಥಳ** | **:** | **ರುದನೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ-1, ಚಾಸಾ-6 ರಿಂದ 9 ಮತ್ತು 14 ರವರು ನನಗೆ ಗೊತ್ತು.

ದಿನಾಂಕ 23-06-2018 ರಂದು ಬೆಳಗ್ಗೆ 8 ಗಂಟೆ ಸುಮಾರಿಗೆ ಪ್ರಾಸಾ-3 ರವರು ಬಂದು ಗಲ್ಲಾ ಒಡೆದು ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಕಳ್ಳತನವಾಗು ಒಂದು ದಿನದ ಮೋದಲೆ ನಮ್ಮ ಐಟಿಐ ಕಾಲೇಜ ಹತ್ತಿರ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿದ್ದೇನೆ. ನಂತರ ದೇವಸ್ಥಾನಕ್ಕೆ ಹೋಗಿ ನೋಡಿದಾಗ ಕೀಲಿ ಒಡೆದು ಹಣ ಕಳ್ಳತನ ಮಾಡಿರುತ್ತಾರೆ.

ನಂತರ ಒಂದು ತಿಂಗಳು ಆದ ನಂತರ ದೇವಸ್ಥಾನದಲ್ಲಿ ಪೋಲಸರು 1 ನೇ ಆರೋಪಿಯನ್ನು ತೋರಿಸಿರುತ್ತಾರೆ. ಆಗ ಕಳ್ಳತನ ಮಾಡಿರುವುದು 1 ನೇ ಆರೋಪಿ ಎಂದು ತೋರಿಸಿರುತ್ತಾರೆ. 1 ನೇ ಆರೋಪಿ ನಮ್ಮ ಊರಿನವನಲ್ಲ ಮತ್ತು ಕರಕಮುಕಳಿ ಗ್ರಾಮದವನು. ಪೋಲಿಸರು ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ವಕೀಲರು ಗೈರು ಹಾಜರಿರುವ ಕಾರಣ ಪಾಟೀ ಸವಾಲು ಮುಂದುಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**